ದಿನಾಂಕ: 02.09.2023 ರಂದು ಸಾಕ್ಷಿ ಹಾಜರಿದ್ದು ಪ್ರಮಾಣಿಸಲಾಯಿತು.

ಈ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹಿತ ದೃಷ್ಟಿಯಿಂದ ಮತ್ತು ವಾದಿ ಮತ್ತು ಪ್ರತಿವಾದಿ ಪರ ವಕೀಲರ ಹಿತ ದೃಷ್ಟಿಯಿಂದ, ಸಾಕ್ಷಿ ತಾನು ಯಾವ ರೀತಿ ಹೇಳಿಕೆ ನೀಡಿರುತ್ತಾರೆ ಎನ್ನುವುದನ್ನು ಪರಿಶೀಲಿಸಲು ಮತ್ತು ನಾನು ಈ ರೀತಿ ಹೇಳಿಕೆ ನೀಡಿಲ್ಲ ಎನ್ನುವುದನ್ನು ತಪ್ಪಿಸುವುದಕ್ಕಾಗಿ ಎರಡೂ ಬದಿಯಲ್ಲಿ ನೋಡಿಕೊಳ್ಳಲು ಎರಡೂ ಕಂಪ್ಯೂಟರ್ ಸ್ಕ್ರೀನ್ ಗಳನ್ನು ಅಳವಡಿಸಲಾಗಿದೆ.

ಪಾಟೀ ಸವಾಲು:- ವಾದಿ ಪರ ಶ್ರೀ. ಡಿ ಎನ್ ಎ ಕೆ ವಕೀಲರಿಂದ :-

ನಾನು ಬಿ ಕಾಂ ಪದವಿಧರ. ನಾನು National Insurance Office ನಲ್ಲಿ Development Officer ಆಗಿದ್ದೇನೆ. ನಾನು ನಿಡಿ-23 ಕ್ಕೆ ನೊಂದಣಿ ಕಛೇರಿಯಲ್ಲಿ ಸಹಿ ಹಾಕಿರುತ್ತೇನೆ. 2007 ನೇ ಇಸವಿಯಲ್ಲಿ ಬಳ್ಳಾರಿಯಲ್ಲಿ ಹಾಕಿರುತ್ತೇನೆ. ದಿನಾಂಕ ನೆನಪಿಲ್ಲ. ಗೋಪಿನಾಥ್ ಮತ್ತು ರಾಮಚಂದ್ರ ರಾವ್ ನನಗೆ ಸಂಬಂಧಿಕರರಾಗಿರುವುದಿಲ್ಲ ಆದರೆ ಗೆಳೆಯರಾಗಿರುತ್ತಾರೆ. ಸುಮಾರು 40 ವರ್ಷದಿಂದ ಗೋಪಿನಾಥ್ ಮತ್ತು ರಾಮಚಂದ್ರ ರಾವ್ ರವರ ಕುಟುಂಬದ ಬಗ್ಗೆ ಪರಿಚಯವಿರುತ್ತದೆ. ಮರಣ ಶಾಸನ ಬೆರಳಚ್ಚು ಮಾಡುವ ಸಮಯದಲ್ಲಿ ಯಾರು ಯಾರು ಇದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಹೇಳುವುದೇನೆಂದರೆ ನಾವು ಬರುವಷ್ಟರಲ್ಲಿ ಮರಣ ಶಾಸನವನ್ನು ಬೆರಳಚ್ಚು ಮಾಡಲಾಗಿತ್ತು. ಮರಣ ಶಾಸನವನ್ನು ಬಳ್ಳಾರಿಯಲ್ಲಿ ಬಿ.ಮಲ್ಲಿಕಾರ್ಜುನಗೌಡ ಎನ್ನುವವರು ಅದನ್ನು ಬೆರಳಚ್ಚು ಮಾಡಿರುತ್ತಾರೆ ಎಂದು ಗೊತ್ತಾಯಿತು.

2. ನಾನು ನಿಡಿ-23 ಕ್ಕೆ ನೊಂದಣಿ ಕಛೇರಿಯಲ್ಲಿ ಸಹಿ ಮಾಡುವ ಸಮಯದಲ್ಲಿ ಗೋಪಿನಾಥ್ ಸಹ ಇದ್ದರು ಎಂದರೆ ನಿಜ. ನನಗೆ ಮರಣ ಶಾಸನ ವಿಷಯ ಗೊತ್ತಿಲ್ಲ, ಗೋಪಿನಾಥ್ ಇವರು ನನ್ನನ್ನು ನೊಂದಣಿ ಕಛೇರಿಗೆ ಸಹಿ ಮಾಡಲು ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ನಾನು ನಿಡಿ-23 ನ್ನು ಓದಿ ತಿಳಿದುಕೊಂಡು ಸಹಿ ಹಾಕಿರುತ್ತೇನೆ. ಮರಣ ಶಾಸನದ ಪ್ರಕಾರ ಯಾವಆಸ್ತಿ ಯಾರಿಗೆ ಬರುತ್ತದೆ ಎನ್ನುವುದು ಅದನ್ನು ನೋಡದೇ ಹೇಳಲು ಆಗುವುದಿಲ್ಲ. ಮರಣ ಶಾಸನ ಬರೆದುಕೊಡುವ ಸಮಯದಲ್ಲಿ ರಾಮಚಂದ್ರರಾವ್ ಇವರ ಆರೋಗ್ಯ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು

This is a True Copy of the Court Records Online. Authenticated @ districts.ecourtsindia.com/cnr/KABC010134142011/truecopy/order-18.pdf

www.ecourtsindia.com



ಗೋಪಿನಾಥ್ ಕುಟುಂಬಕ್ಕೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ : ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯಾ ದಾಖಲಿಸಿಕೊಳ್ಳಲಾಗಿದೆ.)

ಓ ಹೇ ಕೇ ಸರಿ ಇದೆ.

(ಲಕ್ಷ್ಮಣ ರಾಮು ಕುರಣೆ )
15 ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC010134142011/truecopy/order-18.pdf